# ***ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.***

**ಉಪಸ್ಥಿತರು : ಶುಷ್ಮ ಟಿ.ಸಿ.**

ಬಿ.ಕಾಂ., ಎಲ್.ಎಲ್.ಬಿ.,

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**ಸಿ.ಸಿ. ನಂ.832/2022**

ಫಿರ್ಯಾದಿ : ಸರಕಾರದ ಪರವಾಗಿ ಮಹಾಲಿಂಗಪೂರ ಪೋಲಿಸ ಠಾಣೆ

**ವಿರುದ್ಧ**

ಆರೋಪಿ ಃ ಹಸನ್ ಇಮಾಮಸಾಬ ಹಂಗರಗಿ

**-:ದೋಷಾರೋಪಣೆ :-**

*ಶುಷ್ಮ ಟಿ.ಸಿ, ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು, ಆರೋಪಿಯಾದ :*

ಆರೋಪಿ ಃ ಹಸನ್ ಇಮಾಮಸಾಬ ಹಂಗರಗಿ,
ಸಾಃ ಡವಳೇಶ್ವರ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 14-04-2018 ರಂದು ಮ.12-15 ಗಂಟೆ ಸುಮಾರಿಗೆ ಡವಳೇಶ್ವರ ಗ್ರಾಮದ ಹೈಸ್ಕೂಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಫಾಯ್ದೆಗೋಸ್ಕರ ಸರಕಾರದಿಂದ ಯಾವುದೇ ಅಧಿಕೃತ ಲೈಸನ್ಸ ವ ಪರ್ಮಿಟ್ ಪಡೆಯದೇ 180 ಎಂ. ಎಲ್. ನ ಬ್ಯಾಗಪೈಪರ್ ವಿಸ್ಕಿಯ ಸರಾಯಿ ತುಂಬಿದ 30 ಪೌಚಗಳನ್ನು ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ತಾಬಾದಲ್ಲಿಟ್ಟುಕೊಂಡಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸರಕಾರದಿಂದ ಯಾವುದೇ ಅಧಿಕೃತ ಲೈಸನ್ಸ ವ ಪರ್ಮಿಟ್ ಪಡೆಯದೇ ಮೇಲೆ ಹೇಳಿರುವ ಸರಾಯಿಯನ್ನು ಅಕ್ರಮವಾಗಿ ಸಾಗಾಟ ಮಾಡಿಕೊಂಡು ಬಂದಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ- ತಿಳಿಯಿತು.

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ- ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-

ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ.

ಸ್ಥಳಃ ಬನಹಟ್ಟಿ
ದಿನಾಂಕ ಃ 23-09-2023